ದಿನಾಂಕ 06/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯ್ತು.

**ಮದಂತರ ಅರ್ಜಿಯ ಆದೇಶದ ಮೇರೆಗೆ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ,ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ- ಶ್ರೀ ಎನ್.ಆರ್ ಪ್ರತಿವಾದಿ ಪರ ವಕೀಲರಿಂದ**

ಸಿದ್ದಪ್ಪ ನನಗೆ ತಾತನಾಗಬೇಕು, ಸಿದ್ದಪ್ಪನಿಗೆ ಇಬ್ಬರು ಮಕ್ಕಳು ಇರುತ್ತಾರೆ. ನಮ್ಮ ತಾತನಿಗೆ ಒಂದು ಆಸ್ತಿ ಇದ್ದು ಅದರ ಸರ್ವೆ ನಂ-153/2 ಇರುತ್ತದೆ. ನಮ್ಮ ತಾತನಿಗೆ ಗಂಪಲಹಳ್ಳಿಯಲ್ಲಿ ಮನೆ ಇರುತ್ತದೆ, ಸದರಿ ಮನೆಯ ಅಳತೆ ಪೂ-ಪ-9 ಅಡಿ, ಉ-ದ-9 ಅಡಿ ಇರುತ್ತದೆ. ಸದರಿ ಮನೆ ನನ್ನ ತಾಯಿ ಹೆಸರಿಗೆ ಇದ್ದು ನಂತರ ನಮ್ಮ ತಾಯಿಂದ ನನ್ನ ಹೆಂಡತಿ ಹೆಸರಿಗೆ ಬಂದಿರುತ್ತದೆ. ಸದರಿ ಮನೆ ನಮ್ಮ ತಾತನ ಆಸ್ತಿ ಎಂದರೆ ಸರಿ, ಸರ್ವೆ ನಂ-139/3 ನನ್ನ ತಾತನ ಆಸ್ತಿ ಎಂದರೆ ಸಾಕ್ಷಿ ನಮ್ಮ ತಂದೆಯ ಸ್ವಯಾರ್ಜಿತ ಆಸ್ತಿ ಎಂದು ಉತ್ತರಿಸಿರುತ್ತಾರೆ. ಸದರಿ ಆಸ್ತಿಯಲ್ಲಿ 1 ಎಕರೆ 4 ಗುಂಟೆ ನಮ್ಮ ತಂದೆಗೆ ಹೆಸರಿಗೆ ಮತ್ತು 1 ಎಕರೆ 4 ಗುಂಟೆ ನಮ್ಮ ಚಿಕ್ಕಪ್ಪ ಕಂಬಣ್ಣನ ಹೆಸರಿಗೆ ಇರುತ್ತದೆ ಎಂದರೆ ಸರಿ. ಸರ್ವೆ ನಂ-139/3 ರಲ್ಲಿ 1 ಎಕರೆ 4 ಗುಂಟೆ ಆಸ್ತಿಯನ್ನು ನಾವು ದೇವರಾಜು ಎನ್ನುವವರಿಗೆ ಮಾರಾಟ ಮಾಡಿರುತ್ತೇವೆ ಎಂದರೆ ಸರಿ. ಖಾತೆ ಪಹಣಿ ದೇವರಾಜು ರವರ ಹೆಸರಿನಲ್ಲಿ ಬರುತ್ತಿದೆ ಎಂದರೆ ಸರಿ.

2. ಉಳಿದ 1 ಎಕರೆ 4 ಗುಂಟೆ 1 ನೇ ಪ್ರತಿವಾದಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ದಾವಾ ಆಸ್ತಿಯನ್ನು ನಾವು ತಲಾ 38 ಗುಂಟೆ ಭಾಗ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ಉತ್ತರ ದಕ್ಷಿಣ ಬದು ಹಾಕಿಕೊಂಡು ಪೂರ್ವದ ಕಡೆ ಪ್ರತಿವಾದಿ ಭಾಗಕ್ಕೆ ಪಶ್ಚಿಮದ ಕಡೆ ನಮ್ಮ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಭಾಗಕ್ಕೆ ಬಂದಿ ಆಸ್ತಿಯಲ್ಲಿ ಅವರು ಮರಗಳನ್ನು ಹಾಕಿಕೊಂಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ತಾತ ಹುಣಸೆ ಮರಗಳನ್ನು ಬೆಳೆಸಿರುತ್ತಾರೆಂದು ಉತ್ತರಿಸಿರುತ್ತಾರೆ.

3. 3 ನೇ ವಾದಿ ನನ್ನ ಮತ್ತು ದೇವರಾಜು ವಿರುದ್ಧ ಭಾಗ ಕೋರಿ ಮೂಲ ದಾವೆ ಸಂಖ್ಯೆ-328/2013 ರಂತೆ ದಾವೆ ಹೂಡಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ನಮ್ಮ ತಂಗಿ 20 ಸಾವಿರ ಹಣ ತೆಗೆದುಕೊಂಡು ರಾಜೀ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಯರನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮ್ಮ ತಂದೆಯ ಆಸ್ತಿಯೆಂದು ಪಕ್ಷಗಾರರನ್ನಾಗಿ ಮಾಡಿಲ್ಲ ಎಂದು ಉತ್ತರಿಸಿರುತ್ತಾರೆ. 1995 ರಲ್ಲಿ ನಮ್ಮ ತಂದೆ ಮತ್ತು ನಮ್ಮ ಚಿಕ್ಕಪ್ಪ ಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.**

(ತೆ ನ್ಯಾ ನ ಉ ಲೇ ಬೆ ಮಾ )

ಓ ಹೇ ಕೇ ಸ ಇ ಎ ಒ

( ರಘುನಾಥ ಗೌಡ ಕೆ.ಟಿ. )
ಪ್ರಧಾನ ಸಿವಿಲ್ ಜಡ್ಜ್, ಮಧುಗಿರಿ.